*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 408/2016
CW-17 PW-5

ಹೆಸರು : ಕಾಳಪ್ಪ

ತಂದೆಯ ಹೆಸರು : ಭೀಮಪ್ಪ

ವಯಸ್ಸು : 66 ವರ್ಷ

ಉದ್ಯೋಗ : ನಿವೃತ್ತ ಎ.ಎಸ್.ಐ.

ವಾಸ ಸ್ಥಳ : ಕಲಬುರಗಿ

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 24.02.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2016 ರಿಂದ 2020 ರವರೆಗೆ ಕಾಳಗಿ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.06.2016ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 12.30 ಗಂಟೆಗೆ ಚಾಸಾ-1ರವರು ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತಾರೆ. ನಾನು ದೂರನ್ನು ಸ್ವೀಕರಿಸಿ ಪ್ರ.ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ- 2 ಮತ್ತು 3ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರಗಿಸಿರುತ್ತೇನೆ. ನಂತರ ನಾನು ಚಾಸಾ-6 ರಿಂದ 14 ರವರ ಹೇಳಿಕೆಗಳನ್ನು ಪಡೆದರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ-18ರವರಿಗೆ ಹಸ್ತಾಂತರಿಸಿರುತ್ತೇನೆ.

ನಾನು ಸ್ವೀಕರಿಸಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದೂರು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1ಬಿ ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ನಿಪಿ- 2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 2ಬಿ ಎಂದು

ಗುರುತಿಸಲಾಯಿತು. ನಾನು ದಾಖಲಿಸಿದ ಪ್ರ.ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಪ್ರ.ವರ್ತಮಾನ ವರದಿಯನ್ನು ನಿಪಿ- 6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 6ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಎಸ್. ವಕೀಲರಿಂದ</u>

ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ದೂರನ್ನು ಚಾಸಾ-1ರವರಿಂದ ಪಡೆದು ಪ್ರ.ವರ್ತಮಾನ ವರದಿಯನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣೆಯ ಅಂಕೆ-ಸಂಖ್ಯೆಗೋಸ್ಕರ ನಿಮ್ಮ ಮೇಲಧಿಕಾರಿಗಳ ಒತ್ತಡದಲ್ಲಿ ಸುಳ್ಳು ಪ್ರಕರಣವನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ಗುನ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.